ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ನಿಮ್ಮ ಕರಾವಳಿ ಭಾಗದ ಹೆಚ್ಚಿನ ಸುದ್ದಿಗಳ ಮಿಂಚಿನ ವೇಗದ ಬ್ರೇಕಿಂಗ್ ಅಪ್‌ಡೇಟ್‌ಗಳು ಇದೀಗ ನಿಮ್ಮ ಬೆರಳತುದಿಯಲ್ಲಿ!
ನಮ್ಮ ನ್ಯೂಸ್ ಆ್ಯಪ್ ಅನ್ನು
ಇಂದೇ ಡೌನ್‌ಲೋಡ್ ಮಾಡಿಕೊಳ್ಳಿ!
udayavani.com

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ



Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಮಂಗಳವಾರ, ಮೇ 23, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00

# ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್ಮೆಂಟ್ : 'ಉತ್ಸವ್ 2 ಕೆ 17' ಕಾರ್ಯಕ್ರಮ

**ಮಹಾನಗರ,** ಮೇ 22: ಅಡ್ಯಾರ್‌ನಲ್ಲಿರುವ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್ಮೆಂಟ್ 'ಉತ್ಸವ್ 2 ಕೆ 17' ಕಾಲೇಜ್ ದಿನವನ್ನು ಕ್ಯಾಂಪಸ್‌ನಲ್ಲಿ ಆಚರಿಸಲಾಯಿತು.

ಮಂಗಳೂರು ಕೊಡೆಕ್ರಾಫ್ಟ್ ಟೆಕ್ನಾಲಜೀಸ್ ಸಂಸ್ಥೆಯ ಸ್ಥಾಪಕ ದೀಕ್ಷಿತ್ ರೈ ಮತ್ತು ಮಣಿಪಾಲ್ ಟೆಕ್ನಾಲಜೀಸ್ ಲಿಮಿಟೆಡ್‌ನ ಪಬ್ಲಿಷಿಂಗ್ ಮತ್ತು ರಫ್ತು ಸೇಲ್ಸ್ ಹೆಡ್ ಗೋವಿಂದ್ರಾಜ್ ಪ್ರಭು ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮೊಟ್ಟಮೊದಲ ಬಾರಿಗೆ, ಸಮಾರಂಭದಲ್ಲಿ ಮುಖ್ಯ ಅತಿಥಿಗಳು ಚಾಂಡೆಯ ಬೀಟ್ಸ್ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.



'ಉತ್ಸವ್ 2 ಕೆ 17' ಕಾರ್ಯಕ್ರಮದಲ್ಲಿ ಗಣ್ಯರು ಮಾತನಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗೋವಿಂದ್ರಾಜ್ ಪ್ರಭು ಅವರು, ಸಹ್ಯಾದ್ರಿ ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗೆ ಮಾತ್ರ ಆದ್ಯತೆ ನೀಡುತ್ತಿಲ್ಲ, ಇಲ್ಲಿ ಶೈಕ್ಷಣಿಕ ಮತ್ತು ಇತರ ಚಟುವಟಿಕೆಗಳ ನಡುವೆ ಸಮತೋಲನವಿದೆ. ಸಾಂಸ್ಕೃತಿಕ ಮತ್ತು ಸಾಮಾಜಿಕ ನಿರ್ವಹಣೆ ಕೈಗಾರಿಕೆಗಳಿಗೆ ವಿದ್ಯಾರ್ಥಿಗಳಿಗೆ ಯೋಗ್ಯವಾಗಿದೆ. ನಾವು ನಿರ್ವಹಿಸುವ ಯಾವುದೇ ಕಾರ್ಯಗಳನ್ನು ಹೊಸತನದಿಂದ ಅನ್ವೇಷಿಸಬೇಕು ಮತ್ತು ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ದೀಕ್ಷಿತ್ ರೈ ಅವರು ಮಾತನಾಡಿ, ತನ್ನ ಭಾಷಣದಲ್ಲಿ ಅವರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕೆಲವು ವಿಚಾರಗಳನ್ನು ತಿಳಿಸಿದರು. ಪ್ರಥಮವಾಗಿ ನೀವೇ ಇತರರಿಗೆ ಒಳ್ಳೆಯವರಾಗಿರಿ, ಪ್ರತಿದಿನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು, ಕಷ್ಟಪಟ್ಟು ಕೆಲಸ ಮಾಡುವುದು ಆಗತ್ಯ. ಇದಕ್ಕೆ ಯಾವುದೇ ಪರ್ಯಾಯವಿಲ್ಲ, ಪ್ರತಿ ದಿನ ಉತ್ತಮವಾಗಿ ಸ್ಪರ್ಧಿಸಲು ಸ್ವಯಂ ಸ್ಪರ್ಧೆಯಿಂದ ಕೆಲಸ ಮಾಡಿ ಎಂದು ಹೇಳಿದರು.

ಸಹ್ಯಾದ್ರಿ ಕಾಲೇಜಿನ ಉಪ ಪ್ರಾಂಶುಪಾಲ ಪ್ರೊ। ಬಾಲಕೃಷ್ಣ ಎಸ್. ಎಸ್. ಅವರು, ಶೈಕ್ಷಣಿಕ ವರ್ಷ 2016-17ರ ವಾರ್ಷಿಕ ವರದಿಯನ್ನು ಮತ್ತು ಸಾಧನೆಗಳನ್ನು ಮತ್ತು ಸಂಸ್ಥೆಯು ಸ್ವೀಕರಿಸಿದ ಗೌರವಗಳ ಬಗ್ಗೆ ಓದಿ ಹೇಳಿದರು.

ಕಾಲೇಜು ಪ್ರಾಂಶುಪಾಲ ಡಾ। ಉಮೇಶ್ ಎಂ. ಭುಶಿ ಅವರು ಅಧ್ಯಕ್ಷತೆ ವಹಿಸಿದ್ದರು.

ಭಂಡಾರಿ ಫೌಂಡೇಶನ್‌ನ ಟ್ರಸ್ಟಿ ದೇವದಾಸ್ ಹೆಗ್ಡೆ ಕಾರ್ಯಕ್ರಮದಲ್ಲಿ ಪಾಲುಗೊಂಡಿದ್ದರು. ಪ್ರತಿ ಸೆಮಿಸ್ಟರ್‌ನ ಶೈಕ್ಷಣಿಕ ಟಾಪರ್‌ಗಳನ್ನು ಮತ್ತು ಪ್ರತಿ ಶಾಖೆಯ ಅತ್ಯುತ್ತಮ ಔಟ್ ಗೋಯಿಂಗ್ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು ಹಾಗೂ ವಿದ್ಯಾರ್ಥಿ ಕೌನ್ಸಿಲ್ ಅನ್ನು ಗೌರವಿಸಲಾಯಿತು. ಇತ್ತೀಚೆಗೆ ನಡೆದ ಟೆಕ್ ವಿಷನ್ 2017ರ ವಿಜೇತರು ಬಹುಮಾನ ಪಡೆದುಕೊಂಡರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.